**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ**

**ಸಿ.ಸಿ ನಂಬ್ರಃ 524/2020**

ಸರ್ಕಾರದ ಪರ
ಕುಂದಾಪುರ ಠಾಣಾ ಪೊಲೀಸರು --- ಪಿರ್ಯಾದಿದಾರರು

-ಮತ್ತು-

ರಘುರಾಮ ಶೇಟ್ ಮತ್ತು ಇತರರು --- ಆರೋಪಿತರು

**ಃದೋಷಾರೋಪಣೆಃ**

**ಶ್ರೀಮತಿ ಶ್ರುತಿ ಶ್ರೀ ಎಸ್. ಬಿ.ಎ., ಎಲ್‌ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,. ಕುಂದಾಪುರ ಆದ ನಾನು ಆರೋಪಿತರಾದ ನಿಮಗೆ ಈ ಮೂಲಕ ಮಾಡುವ ದೋಷಾರೋಪಣೆ ಏನೆಂದರೆಃ**

1. ರಘುರಾಮ ಶೇಟ್, 47 ವರ್ಷ,
ತಂದೆಃ ಗೋಪಾಲಕೃಷ್ಣಾ,
ವಾಸಃ 217/ಎ, ಮಾರುತಿವನ ರೋಡ್,
ಕೋಟೇಶ್ವರ, ಕುಂದಾಪುರ ತಾಲೂಕು.

2. ಸಂತೋಷ ಖಾರ್ವಿ ಯಾನೆ ಸಚಿನ್, 27 ವರ್ಷ,
ತಂದೆಃ ಕುಮಾರ,
ವಾಸಃ ಶಾಂತಿನಗರ, ತೊಂಕ,
ಕಾಸ್ಕೊಡು, ಹೊನ್ನಾವರ ತಾಲೂಕು,
ಉತ್ತರ ಕನ್ನಡ ಜಿಲ್ಲೆ. --- ಆರೋಪಿತರು

ದಿ. 18.07.2019 ರಂದು ರಾತ್ರಿ 10.15 ಗಂಟೆಗೆ ಕುಂದಾಪುರ ತಾಲೂಕು ಕಸಬಾ ಗ್ರಾಮದ ಖಾರ್ವಿಕೇರಿ ರಸ್ತೆಯಿಂದ ಹೊಸ ಬಸ್ ನಿಲ್ದಾಣ ಕಡೆಗೆ ಹೋಗುವ ರಸ್ತೆಯ ಎ.ಕೆ. ಮಂಜೀಲ್ ಹೆಸರಿನ ಮನೆಯ ಬಳಿ 1 ನೇ ಆರೋಪಿಯು ಕೆಎ 20 ಸಿ 9308 ನೇ ನಂಬ್ರದ ಟಾಟಾ ಎಸ್ ವಾಹನವನ್ನು ನಿರ್ಲಕ್ಷತನದಿಂದ ಚಲಾಯಿಸಿಕೊಂಡು ಬರುತ್ತಿದ್ದವನನ್ನು ಸಾಕ್ಷಿ1 ನೇಯವರು ಸಾಕ್ಷಿ4, 5 ಮತ್ತು 6 ನೇ ರವರ ಜೊತೆಗೆ ತಡೆದು ನಿಲ್ಲಿಸಿ ಪರಿಶೀಲಿಸಿದಾಗ ವಾಹನದ ಬಾಡಿಯಲ್ಲಿ 40 ಸಿಮೆಂಟ್ ಚೀಲದಲ್ಲಿ ಮರಳನ್ನು ತುಂಬಿಸಿರುವುದು ಕಂಡು ಬಂದಿದ್ದು ಸದ್ರಿ ಮರಳಿನ ಬಗ್ಗೆ ವಿಚಾರಣೆ ನಡೆಸಲಾಗಿ 1 ನೇ ಆರೋಪಿಯು 2 ನೇ ಆರೋಪಿತನೊಂದಿಗೆ ಸೇರಿ ಖಾರ್ವಿಕೇರಿಯ ಪಂಚ ಗಂಗಾವಳಿ ನದಿಯಿಂದ ಮರಳನ್ನು ಕಳವು ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 379ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಅಕ್ರಮವಾಗಿ ಮಾರಾಟ ಮಾಡುವ ಉದ್ದೇಶದಿಂದ ಯಾವುದೇ ಪರವಾನಗಿ ಇಲ್ಲದೆ KA 20 C 9308 ನಂಬ್ರದ ಟಾಟಾ ಏಸ್ ವಾಹನವನ್ನು ನಿರ್ಲಕ್ಷತನದಿಂದ ಚಾಲನೆ ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು ಕಲಂ 184 ರ ಐಎಂವಿ ಕಾಯಿದೆ ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಕ್ರಮವಾಗಿ ಮಾರಾಟ ಮಾಡುವ ಉದ್ದೇಶದಿಂದ ಯಾವುದೇ ಪರವಾನಗಿ ಇಲ್ಲದೆ KA 20 C 9308 ನಂಬ್ರದ ಟಾಟಾ ಏಸ್ ವಾಹನವನ್ನು ಪರವಾನಿಗೆಯ ಷರತ್ತನ್ನು ಉಲ್ಲಂಘಿಸಿ ಚಾಲನೆ ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು ಕಲಂ 66 ಜೊತೆಗೆ 192 ರ ಐಎಂವಿ ಕಾಯಿದೆ ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

(ಸದರಿ ಆರೋಪಗಳ ಕುರಿತಂತೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ )

ದಿನಾಂಕಃ 04-02-2025

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಕುಂದಾಪುರ

**ಸಿ.ಸಿ. ಸಂಖ್ಯೆ: 524/2020**

**ಫಿರ್ಯಾದುದಾರರು:** ಸರಕಾರದ ಪರವಾಗಿ ಕುಂದಾಪುರ ಠಾಣಾ ಪೋಲಿಸರು,

**- ವಿರುದ್ಧ -**

**ಆರೋಪಿ** : **1.** ರಘುರಾಮ ಶೇಟ್, ತಂದೆ: ಗೋಪಾಲಕೃಷ್ಣಾ.

**1. ನಿಮಗೆ ಓದಿ ಹೇಳಿದ ದೋಷಾರೋಪಣೆಯು ಅರ್ಥವಾಗಿದೆಯೇ ?**
ಉ.

**2. ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರ ಅಥವಾ ವಿಚಾರಣೆ ಮಾಡ ಬಯಸುವಿರಾ ?**
ಉ.

**ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಅವು ಸರಿಯಾಗಿರುತ್ತವೆಂದು ಈ ಮೂಲಕ ದೃಢೀಕರಿಸುತ್ತೇನೆ.**

ಹೆಚ್ಚುವರಿ **ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ.,** ಕುಂದಾಪುರ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಕುಂದಾಪುರ

**ಸಿ.ಸಿ. ಸಂಖ್ಯೆ: 524/2020**

**ಫಿರ್ಯಾದುದಾರರು:** ಸರಕಾರದ ಪರವಾಗಿ ಕುಂದಾಪುರ ಠಾಣಾ ಪೋಲಿಸರು,

**- ವಿರುದ್ಧ -**

**ಆರೋಪಿ** : **2.** ಸಂತೋಷ ಖಾರ್ವಿ ಯಾನೆ ಸಚಿನ್, ತಂದೆ: ಕುಮಾರ.

**2. ನಿಮಗೆ ಓದಿ ಹೇಳಿದ ದೋಷಾರೋಪಣೆಯು ಅರ್ಥವಾಗಿದೆಯೇ ?**
ಉ.

**2. ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರ ಅಥವಾ ವಿಚಾರಣೆ ಮಾಡ ಬಯಸುವಿರಾ ?**
ಉ.

**ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಅವು ಸರಿಯಾಗಿರುತ್ತವೆಂದು ಈ ಮೂಲಕ ದೃಢೀಕರಿಸುತ್ತೇನೆ.**

ಹೆಚ್ಚುವರಿ **ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ.,** ಕುಂದಾಪುರ.